ಬಿಜೆಪಿ, ಆರ್‌ಎಸ್‌ಎಸ್ ಬಗ್ಗೆ ಸಿಎಂ ಹೇಳಿಕೆಗೆ ಖಂಡನೆ

ಭಾರತೀಯ ಜನತಾ ಪಕ್ಷದ ಕಾರ್ಯಕರ್ತರ ಪ್ರತಿಭಟನೆ

ಮೈಸೂರು,ಜ.೧೨– ಬಿಜೆಪಿ, ಆರ್‌ಎಸ್‌ಎಸ್, ಭಜರಂಗದಳ ಕಾರ್ಯಕರ್ತರನ್ನು ಉಗ್ರಗಾಮಿಗಳು ಎಂದಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಬಿಜೆಪಿ ಕಾರ್ಯಕರ್ತರು ರಾಜ್ಯಾದ್ಯಂತ 'ಜೈಲ್ ಭರೋ' ಹೋರಾಟ ಮಾಡುತ್ತಿದ್ದು, ಮೈಸೂರಿನಲ್ಲಿ ಸಹ ಪ್ರತಿಭಟನೆ ನಡೆಸಿದರು.

ಶುಕ್ರವಾರ ಬೆಳಿಗ್ಗೆ ನಗರದ ದೇವರಾಜ ಮಾರುಕಟ್ಟೆಯ ಬಳಿಯ ಚಿಕ್ಕಗಡಿಯಾರದ ಮುಂಭಾಗ ಮಾಜಿ ಸಚಿವ ಎಸ್.ಎ.ರಾಮದಾಸ್ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿದ ಬಿಜೆಪಿ ಕಾರ್ಯಕರ್ತರು, ಕಾಂಗ್ರೆಸ್ ಸರ್ಕಾರ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ನಾನಾ ಘೋಷಣೆಗಳನ್ನು ಕೂಗಿ ತಮ್ಮ ಆಕ್ರೋಶ ವ್ಯಕ್ತಪಡಿಸಿದರಲ್ಲದೆ, ಕೂಡಲೇ ಸಿದ್ದರಾಮಯ್ಯ ಹಾಗೂ ದಿನೇಶ್ ಗುಂಡೂರಾವ್ ಅವರು ತಮ್ಮ ಹೇಳಿಕೆಗೆ ಸಂಬಂಧಿಸಿದಂತೆ ಕ್ಷಮೆ ಯಾಚಿಸಬೇಕು ಎಂದು ಆಗ್ರಹಿಸಿದರು.

ಇದೇ ವೇಳೆ ಮಾತನಾಡಿದ ಮಾಜಿ ಸಚಿವ ಎಸ್.ಎ.ರಾಮದಾಸ್, ರಾಜ್ಯಕ್ಕೆ ಕೇಂದ್ರ ಸರ್ಕಾರದಿಂದ ಬಂದಿರುವ ಸಾವಿರಾರು ಕೋಟಿ ರೂ. ಅನುದಾನದ ಲೆಕ್ಕ ಕೇಳಿದ್ದಕ್ಕೆ ಬಿಜೆಪಿ, ಆರ್‌ಎಸ್‌ಎಸ್, ಭಜರಂಗದಳದವರನ್ನು ಉಗ್ರರು ಎನ್ನುತ್ತಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಬಿಜೆಪಿ ನಗರಾಧ್ಯಕ್ಷ ಡಾ.ಬಿ.ಎಚ್.ಮಂಜುನಾಥ್ ಮಾತನಾಡಿ, ವಾಜಪೇಯಿ, ನರೇಂದ್ರ ಮೋದಿ ಅವರಂತಹ ಮಹಾನ್ ನಾಯಕರನ್ನು ಕೊಟ್ಟ ಸಂಘಟನೆ ಬಗ್ಗೆ ಮಾತನಾಡಲು ಸಿದ್ದರಾಮಯ್ಯ ಅವರಿಗೆ ಯೋಗ್ಯತೆ ಇಲ್ಲ. ಅಲ್ಪಸಂಖ್ಯಾತರನ್ನು ಓಲೈಸಲು ಈ ರೀತಿ ಬೇಕಾ ಬಿಟ್ಟಿ ಹೇಳಿಕೆ ನೀಡುತ್ತಿದ್ದಾರೆ ಎಂದು ಕಿಡಿ ಕಾರಿದರು.

ಮುಡಾ ಮಾಜಿ ಅಧ್ಯಕ್ಷ ಎಲ್.ನಾಗೇಂದ್ರ, ನಗರಪಾಲಿಕೆ ಸದಸ್ಯರಾದ ನಂದೀಶ್‌ಪ್ರೀತಂ, ಶಂಕರ್, ಬಿ.ವಿ.ಮಂಜುನಾಥ್, ಜಗದೀಶ್, ರಾಜ್ಯ ಹಿಂದುಳಿದ ಮೋರ್ಚಾ ಕಾರ್ಯದರ್ಶಿ ಬಿ.ಎಂ. ನಟರಾಜ್, ಮುಖಂಡರಾದ ಕೆ.ಆರ್.ಮೋಹನ್ ಕುಮಾರ್, ರಘು ಕೌಟಿಲ್ಯ, ಎಚ್.ವಿ.ರಾಜೀವ್, ವಸ್ತುಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷ ಬಿ.ಪಿ.ಮಂಜುನಾಥ್, ಡಾ.ಅನಿಲ್ ಥಾಮಸ್, ಮಲ್ಲಪ್ಪಗೌಡ, ಎಂ.ಎಸ್.ಧನಂಜಯ, ಅಪ್ಪಣ್ಣ, ಗಿರಿಧರ್, ವನಿತಾ ಪ್ರಸನ್ನ, ಶ್ರೀವತ್ಸ, ಸಿ.ಬಸವೇಗೌಡ, ಶ್ರೀರಾಂ, ರೋಟರಿ ದಿನೇಶ್, ಲಕ್ಷ್ಮೀದೇವಿ, ಚಿಕ್ಕಮ್ಮ ಬಸವರಾಜ್, ಹೇಮಾ ನಂದೀಶ್, ಮೈ.ಪು.ರಾಜೇಶ್, ಹೇಮಂತ್, ಜಯಂತ್, ಮೈ.ಕಾ.ಪ್ರೇಮ್‌ಕುಮಾರ್, ಜಗದೀಶ್, ಲೀಲಾಶೆಣೈ, ಜೋಗಿ ಮಂಜು, ಆನಂದ್, ರಮೇಶ್, ಕುಮಾರ್, ರಾಮಚಂದ್ರ ಮತ್ತಿತರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಕಾಂಗ್ರೆಸ್ ಬಗ್ಗೆ ಜನತೆಗೆ ಅಪಾರ ಒಲವು: ಸಿಎಂ

ಮೈಸೂರು,ಜ.೧೨– ರಾಜ್ಯದ ಜನತೆಗೆ ಕಾಂಗ್ರೆಸ್ ಪಕ್ಷದ ಬಗ್ಗೆ ಅಪಾರ ಒಲವಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಒಂದು ತಿಂಗಳು ರಾಜ್ಯಾದ್ಯಂತ ಪ್ರವಾಸ ಮುಗಿಸಿಕೊಂಡು ಬಂದಿರುವ ಅವರು, ಮಾಧ್ಯಮದವರೊಂದಿಗೆ ತಮ್ಮ ಅನುಭವವನ್ನು ಸೂಕ್ಷ್ಮವಾಗಿ ಹಂಚಿಕೊಂಡರು. ಹೋದ ಕಡೆಯಲ್ಲೆಲ್ಲಾ ಜನರು ಕಾಂಗ್ರೆಸ್ ಸರ್ಕಾರ ಮಾಡಿರುವ ಅಭಿವೃದ್ಧಿ ಕಾರ್ಯಗಳ ಬಗ್ಗೆ ಶ್ಲಾಘಿಸಿ ದ್ದಾರೆ ಎಂದು ಹೇಳಿದರು. ರಾಜ್ಯ ಸರ್ಕಾರ ಜಾರಿಗೆ ತಂದಿರುವ ಅನ್ನಭಾಗ್ಯ, ಕ್ಷೀರಭಾಗ್ಯ ಹಾಗೂ ಕ್ಷೀರಧಾರೆ ಮುಂತಾದ ಎಲ್ಲಾ ಯೋಜನೆಗಳು ಜನರನ್ನು ತಲುಪಿವೆ ಎಂದರು.

ಜನರೇ ಅರೆಸ್ಟ್ ಮಾಡ್ತಾರೆ!: ಬಿಜೆಪಿ, ಆರ್‌ಎಸ್‌ಎಸ್ ಹಾಗೂ ಭಜರಂಗದಳದ ಕಾರ್ಯಕರ್ತರು ಸಾಮಾಜಿಕ ಜಾಲತಾಣದಲ್ಲಿ 'ಅರೆಸ್ಟ್ ಮಿ' ಆಂದೋಲನ ನಡೆಸುತ್ತಿರುವ ಬಗ್ಗೆ ಪ್ರತಿಕ್ರಿಯಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಬಿಜೆಪಿಯವರನ್ನು ಪೊಲೀಸರು ಅರೆಸ್ಟ್ ಮಾಡುವ ಅಗತ್ಯವಿಲ್ಲ, ಜನರೇ ಅರೆಸ್ಟ್ ಮಾಡ್ತಾರೆ ನೋಡ್ತಿರಿ, ಎಂದು ಮಾರ್ಮಿಕವಾಗಿ ನುಡಿದರು. ಜನರ ಮನಸ್ಸಿನಲ್ಲಿ ಕೋಮುಭಾವನೆ ಬಿತ್ತುವವರನ್ನು, ಸಮಾಜದಲ್ಲಿ ಬೆಂಕಿ ಹಚ್ಚುವವರನ್ನು ಜನರೇ ಅರೆಸ್ಟ್ ಮಾಡ್ತಾರೆ. ಪ್ರಧಾನಿಯವರು ಕಾಂಗ್ರೆಸ್ ಶಾಸಕರ ವೈಫಲ್ಯಗಳನ್ನು ಹೇಳುವ ಮೊದಲು ನಾನೇ ಪ್ರಧಾನಿಯವರ ವೈಫಲ್ಯ ಹೇಳುತ್ತೇನೆ ಎಂದು ವಾಗ್ದಾಳಿ ನಡೆಸಿದರು.

ನಾಳೆ ಎಸ್‌ಎಂಪಿ ಕ್ಯಾಂಟೀನ್ ಉದ್ಘಾಟನೆ

ಮೈಸೂರು,ಜ.೧೨– ಎಸ್‌ಎಂಪಿ ಫೌಂಡೇಷನ್ ವತಿಯಿಂದ ನಗರದ ವಿಶ್ವೇಶ್ವರಯನಗರದ ಅಕ್ಕಮಹಾದೇವಿ ರಸ್ತೆಯಲ್ಲಿರುವ ರೋಷನ್ ಫ್ಯಾಕ್ಟರಿ ಎದುರು ಆರಂಭಿಸಲಾಗುತ್ತಿರುವ ಎಸ್‌ಎಂಪಿ ಕ್ಯಾಂಟೀನ್ ಉದ್ಘಾಟನಾ ಸಮಾರಂಭ ಜ.೧೪ರಂದು ನಡೆಯಲಿದೆ ಎಂದು ಫೌಂಡೇಷನ್ ಸಂಸ್ಥಾಪಕ ಅಧ್ಯಕ್ಷ ಎಸ್.ಎಂ.ಶಿವಪ್ರಕಾಶ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕ್ಯಾಂಟೀನ್‌ಅನ್ನು ಮಾಜಿ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಉದ್ಘಾಟಿಸಲಿದ್ದು, ಮಾಜಿ ಸಚಿವ ವಿ.ಶ್ರೀನಿವಾಸ ಪ್ರಸಾದ್ ಅಧ್ಯಕ್ಷತೆ ವಹಿಸಲಿದ್ದಾರೆ ಎಂದರು.

ಮುಖ್ಯ ಅತಿಥಿಗಳಾಗಿ ಮಾಜಿ ಸಚಿವ ವಿ.ಸೋಮಣ್ಣ, ಸಂಸದ ಪ್ರತಾಪ ಸಿಂಹ, ಬಿಜೆಪಿ ನಗರಾಧ್ಯಕ್ಷ ಡಾ.ಬಿ.ಎಚ್.ಮಂಜುನಾಥ್, ಬಿಜೆಪಿ ಜಿಲ್ಲಾಧ್ಯಕ್ಷ ಎಂ.ಶಿವಣ್ಣ, ಆರ್‌ಎಸ್‌ಎಸ್ ದಕ್ಷಿಣ ಪ್ರಾಂತ ಸಂಘ ಚಾಲಕರಾದ ಮಾ.ವೆಂಕಟರಾಮು ಭಾಗವಹಿಸಲಿದ್ದಾರೆ ಎಂದು ಹೇಳಿದರು.

ಎಸ್‌ಎಂಪಿ ಕ್ಯಾಂಟೀನ್‌ನಲ್ಲಿ ಒಂದೇ ಬಾರಿಗೆ ೮೦ರಿಂದ ೧೦೦ ಮಂದಿ ಕೂರುವ ಅವಕಾಶವಿದೆ. ಬೆಳಿಗ್ಗೆ ೭.೩೦ರಿಂದ ೧೧ ಗಂಟೆಯವರೆಗೆ ತಿಂಡಿ, ೧೧.೩೦ರಿಂದ ಮಧ್ಯಾಹ್ನ ೩.೩೦ರವರೆಗೆ ಊಟ ಲಭ್ಯವಿರುತ್ತದೆ. ಉಪಾಹಾರದಲ್ಲಿ ದೋಸೆ, ಇಡ್ಲಿ, ಚಪಾತಿ, ಬಾತ್ ಇರುತ್ತದೆ. ಮಧ್ಯಾಹ್ನದ ಊಟದಲ್ಲಿ ಅನ್ನ, ಸಾಂಬಾರ್, ಪಾಯಸ, ಮಜ್ಜಿಗೆ, ಉಪ್ಪಿನಕಾಯಿ ಇರುತ್ತದೆ. ಟೀ, ಕಾಫಿಗೆ ೫ ರೂ. ಹಾಗೂ ಊಟ, ತಿಂಡಿಗೆ ೧೫ ರೂ. ನಿಗದಿಪಡಿಸಲಾಗಿದೆ ಎಂದು ವಿವರಿಸಿದರು. ಬಿಜೆಪಿ ರಾಜ್ಯ ಕಾರ್ಯಕಾರಿಣಿ ಸದಸ್ಯ ಕೆ.ವಸಂತ ಕುಮಾರ್, ನಗರ ಬಿಜೆಪಿ ಕಾರ್ಯಕಾರಿ ಸದಸ್ಯರಾದ ನಾಗರಾಜ್, ಮೋಹನ್ ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

೧೧ ಮಕ್ಕಳಿಗೆ ಜನ್ಮ ನೀಡಿದ ಮಹಾ ಮಾತೆ!

ಡಜನ್‌ಗೆ ಒಂದು ಮಗು ಕಡಿಮೆ ಹೆತ್ತು ಮರಿಯಾ ಫರ್ನಾಂಡಿಸ್(೪೨) ಗಿನ್ನಿಸ್ ಬುಕ್‌ನಲ್ಲಿ ದಾಖಲೆ ನಿರ್ಮಿಸಿದ್ದಾರೆ.

ಸ್ವಾಭಾವಿಕವಾಗಿ ಗರ್ಭ ಧರಿಸಲು ಮರಿಯಾ ಹಾಗೂ ಆಕೆಯ ಪತಿಗೆ ಅಸಾಧ್ಯವಾದ ಕಾರಣ ಅವರು ಕೃತಕ ಗರ್ಭಧಾರಣೆ ಮೂಲಕ ೧೧ ನವಜಾತ ಶಿಶುಗಳನ್ನು ಒಮ್ಮೆಲೇ ಬಂಪರ್ ಆಗಿ ಪಡೆದು ಕೊಂಡರು.

ಹೌದಾ!

ಮರಿಯಾಳ ಆರೋಗ್ಯದ ಬಗ್ಗೆ ನಿಗಾವಹಿಸಿದ್ದ ಇಂಡಿಯಾನಾದ ರಿಲೆ ಚಿಲ್ಡ್ರನ್ ಆಸ್ಪತ್ರೆಯ ಡಾ.ವಿಲಿಯಂ ರಾಬರ್ಟ್ ಅವರು, ೧೧ ಮಕ್ಕಳನ್ನು ಮರಿಯಾ ಸ್ವಾಭಾವಿಕವಾಗಿಯೇ ಹೆತ್ತಿದ್ದಾಳೆ. ಈ ೧೧ ಮಕ್ಕಳಲ್ಲಿ ೬ ಮಕ್ಕಳು ಒಂದೇ ರೀತಿ ಇರುವ ಅವಳಿ ಮಕ್ಕಳಾಗಿದ್ದು, ಅವುಗಳು ೧ರಿಂದ ೧.೫ ಪೌಂಡ್ ತೂಕವಿವೆ. ಎಲ್ಲಾ ಮಕ್ಕಳು ಆರೋಗ್ಯದಿಂದಿವೆ ಎಂದಿದ್ದಾರೆ. ಈ ಗಜ ಗರ್ಭದ ಹೆರಿಗೆ ೨೦೧೫ರ ಗಿನ್ನಿಸ್ ಬುಕ್‌ನಲ್ಲಿ ದಾಖಲಾಗಿದೆ.

ಇಎಸ್‌ಐ ಆಸ್ಪತ್ರೆಗೆ ಸೌಲಭ್ಯ ಹೆಚ್ಚಳಕ್ಕೆ ಆಗ್ರಹ

ಎಸ್‌ಬಿಎಂ ಸ್ನೇಹ ಬಳಗದ ಕಾರ್ಯಕರ್ತರ ಪ್ರತಿಭಟನೆ

ಇಎಸ್‌ಐ ಆಸ್ಪತ್ರೆಗೆ ಸೌಲಭ್ಯ ಹೆಚ್ಚಳಕ್ಕೆ ಆಗ್ರಹಿಸಿ ಎಸ್‌ಪಿಎಂ ಸ್ನೇಹ ಬಳಗದ ವತಿಯಿಂದ ಆಸ್ಪತ್ರೆಯ ಮುಂಭಾಗ ಪ್ರತಿಭಟನೆ ನಡೆಸಿದರು.

ಮೈಸೂರು,ಜ.೧೨– ನಗರದ ಕೆಆರ್‌ಎಸ್ ರಸ್ತೆಯಲ್ಲಿರುವ ಇಎಸ್‌ಐ ಆಸ್ಪತ್ರೆ ಹಲವಾರು ಸೌಲಭ್ಯಗಳಿಂದ ವಂಚಿತವಾಗಿದ್ದು, ಕಾರ್ಮಿಕರಿಗೆ ಯಾವುದೇ ಪ್ರಯೋಜನವಿಲ್ಲದಂತಾಗಿದೆ. ಹೀಗಾಗಿ ಆಸ್ಪತ್ರೆಗೆ ಅಗತ್ಯ ಸೌಲಭ್ಯ ಹೆಚ್ಚಿಸುವಂತೆ ಆಗ್ರಹಿಸಿ ಎಸ್‌ಬಿಎಂ ಸ್ನೇಹ ಬಳಗದ ಕಾರ್ಯಕರ್ತರು ನಗರಪಾಲಿಕೆ ಸದಸ್ಯ ಎಸ್‌ಬಿಎಂ ಮಂಜು ನೇತೃತ್ವದಲ್ಲಿ ಪ್ರತಿಭಟನೆ ನಡೆಸಿದರು.

ಶುಕ್ರವಾರ ಬೆಳಿಗ್ಗೆ ನಗರದ ಕೆಆರ್‌ಎಸ್ ರಸ್ತೆಯಲ್ಲಿರುವ ಇಎಸ್‌ಐ ಆಸ್ಪತ್ರೆ ಮುಂಭಾಗ ಜಮಾವಣೆಗೊಂಡ ಬಳಗದ ಕಾರ್ಯಕರ್ತರು ಕೂಡಲೇ ಆಸ್ಪತ್ರೆಯನ್ನು ಪುಶ್ಚೇತನಗೊಳಿಸಬೇಕು ಎಂದು ಆಗ್ರಹಿಸಿದರು.

ಇದೇ ವೇಳೆ ಮಾತನಾಡಿದ ಎಸ್‌ಬಿಎಂ ಮಂಜು, ಇಎಸ್‌ಐ ಆಸ್ಪತ್ರೆಯಲ್ಲಿ ಕಾರ್ಮಿಕರಿಗೆ ಅಗತ್ಯ ಸೌಲಭ್ಯ ಕಲ್ಪಿಸುತ್ತಿಲ್ಲ. ಸುಸಜ್ಜಿತ ಸಲಕರಣೆ ಅಳವಡಿಸಿಲ್ಲ. ಔಷಧಿಗಳ ಪೂರೈಕೆಯಾಗುತ್ತಿಲ್ಲ. ಕಾರ್ಮಿಕರಿಗೆ ಇಎಸ್‌ಐ ಆಸ್ಪತ್ರೆ ಇದ್ದೂ ಇಲ್ಲದಂತಾಗಿದೆ ಎಂದು ಬೇಸರ ವ್ಯಕ್ತಪಡಿಸಿದರಲ್ಲದೆ, ಆಸ್ಪತ್ರೆಗೆ ಸೌಲಭ್ಯ ನೀಡದಿದ್ದರೆ ತೀವ್ರ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಸಿದರು.

ಬಳಗದ ಅಧ್ಯಕ್ಷ ಬಿ.ಮಹದೇವು, ಫಾಲ್ಕನ್ ಬೋರೇಗೌಡ, ಶ್ರೀನಿವಾಸ್, ಶಿವರಾಮು, ರಮೇಶ್, ರಾಜು, ಚೇತನ್, ಭರತ್, ಯತೀಶ್, ಕುಮಾರ್, ಗಿರೀಶ್, ಮದನ್, ಅರ್ಜುನ್, ಕುಲದೀಪ್ ಇನ್ನಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

೩೦ರಿಂದ ರಾಷ್ಟ್ರೀಯ ರಂಗ ಉತ್ಸವ

ಮೈಸೂರು,ಜ.೧೨–ಇಂಜಿನಿಯರುಗಳಿಗಾಗಿ ಸ್ಥಾಪಿಸಿರುವ ಅಭಿಯಂತರರು ರಂಗ ವೇದಿಕೆಯ ೨೫ನೇ ವಾರ್ಷಿಕೋತ್ಸವದ ಪ್ರಯುಕ್ತ ಜ. ೩೦ರಿಂದ ಫೆ. ೪ರವರೆಗೆ ೬ ದಿನಗಳ ಕಾಲ ನಗರದ ಕಲಾಮಂದಿರದಲ್ಲಿ ರಾಷ್ಟ್ರೀಯ ರಂಗ ಉತ್ಸವವನ್ನು ಹಮ್ಮಿಕೊಳ್ಳಲಾಗಿದೆ ಎಂದು ವೇದಿಕೆಯ ಕಾರ್ಯದರ್ಶಿ ಬಿ.ಎಸ್.ತಾಂಡವಮೂರ್ತಿ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಷ್ಟ್ರೀಯ ರಂಗ ಉತ್ಸವವನ್ನು ಜ.೩೦ರಂದು ಸಂಜೆ ೬ ಗಂಟೆಗೆ ರಂಗ ನಿರ್ದೇಶಕ ಎಂ.ಎಸ್.ಸತ್ಯು ಉದ್ಘಾಟಿಸಲಿದ್ದು, ರಾಷ್ಟ್ರೀಯ ನಾಟಕ ಶಾಲೆಯ ನಿರ್ದೇಶಕ ಸಿ.ಬಸವಲಿಂಗಯ್ಯ, ನಾಟಕ ಅಕಾಡೆಮಿ ಅಧ್ಯಕ್ಷ ಜೆ.ಲೋಕೇಶ್ ಭಾಗವಹಿಸಲಿದ್ದಾರೆ ಎಂದರು.

ರಂಗ ಉತ್ಸವದ ಅಂಗವಾಗಿ ಸುಚಿತ್ರ ಕಲಾ ಗ್ಯಾಲರಿಯಲ್ಲಿ ನಡೆಸಲಿರುವ ಚಿತ್ರಕಲಾ ಪ್ರದರ್ಶನವನ್ನು ಜ.೩೧ರಂದು ಬೆಳಿಗ್ಗೆ ೧೦.೩೦ಕ್ಕೆ ಚಿತ್ರ ಕಲಾವಿದ ಪ.ಸ.ಕುಮಾರ್ ಉದ್ಘಾಟಿಸಲಿದ್ದಾರೆ. ಫೆ.೪ರಂದು ಬೆಳಿಗ್ಗೆ ೧೦.೩೦ಕ್ಕೆ ಮನೆಯಂಗಳದಲ್ಲಿ ನಡೆಯಲಿರುವ 'ರಂಗ ಚಿತ್ರರಂಗ' ಎಂಬ ವಿಷಯ ಕುರಿತ ರಾಜ್ಯ ಮಟ್ಟದ ವಿಚಾರಸಂಕಿರಣವನ್ನು ಚಲನಚಿತ್ರ ನಿರ್ದೇಶಕ ಜಯತೀರ್ಥ ಉದ್ಘಾಟಿಸಲಿದ್ದಾರೆ. ಜ.೩೧ರಿಂದ ಫೆ.೩ರವರೆಗೆ ಕಿಂದರಜೋಗಿ ಆವರಣದಲ್ಲಿ ರಂಗ ಸಂಗೀತ–ನೃತ್ಯ ಮಾಲಿಕೆಯನ್ನು ಹಮ್ಮಿಕೊಳ್ಳಲಾಗಿದೆ ಎಂದು ವಿವರಿಸಿದರು.

ಪ್ರತಿದಿನ ಸಂಜೆ ೭ಕ್ಕೆ ನಾಟಕ ಪ್ರದರ್ಶನವಾಗಲಿವೆ. ನಾಟಕಗಳಿಗೆ ಪ್ರವೇಶ ದರ ೧೦೦ ರೂ. ಮತ್ತು ೫೦ ರೂ. ನಿಗದಿಪಡಿಸಲಾಗಿದೆ. ಸೀಜನ್ ಟಿಕೆಟ್ ೫೦೦ ರೂ. ಮತ್ತು ೨೫೦ ರೂ.ಗಳಿಗೆ ನಿಗದಿಪಡಿಸಲಾಗಿದೆ ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ರಂಗ ಉತ್ಸವದ ಪೋಸ್ಟರ್ ಮತ್ತು ಟೀಸರ್ ಅನ್ನು ಬಿಡುಗಡೆ ಮಾಡಲಾಯಿತು. ತಂಡದ ಅಧ್ಯಕ್ಷ ಸುರೇಶ್ ಬಾಬು, ಹಿರಿಯ ರಂಗಕರ್ಮಿ ರಾಮೇಶ್ವರಿ ವರ್ಮಾ, ರಾಜಶೇಖರ ಕದಂಬ ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ನಾಟಕಗಳು

ಜ.೩೦	ಮೂಗ್ ಮಸಾಲ (ಕನ್ನಡ)
ಜ.೩೧	ಕರುಪ್ಪು (ರಂಗ ನೃತ್ಯ ರೂಪಕ)
ಫೆ.೧	ದಿ ವುಮನ್ ಇನ್ ಮಿ(ಇಂಗ್ಲಿಷ್)
ಫೆ.೨	ಥೈಯ್ಯ ಥೈಯ್ಯಂ (ಮಲಯಾಳಂ)
ಫೆ.೩	ಹುಲಿ ಹಿಡಿದ ಕಡಸು(ಕನ್ನಡ)
ಫೆ.೪	ದರ್ದ್‌ಪೋರ(ಹಿಂದಿ)

ಸಾಕ್ಷ್ಯಚಿತ್ರಕ್ಕೆ ಅಂತಾರಾಷ್ಟ್ರೀಯ ಪುರಸ್ಕಾರ

ಮೈಸೂರು,ಜ.೧೨– ಕಾಸರಗೋಡಿನ ಶ್ರೀ ಗೋಪಾಲ ಕೃಷ್ಣ ಯಕ್ಷಗಾನ ಬೊಂಬೆಯಾಟ ಸಂಘದ ಸಮಗ್ರ ಚಿತ್ರಣ ಇರುವ ಸಾಕ್ಷ್ಯಚಿತ್ರಕ್ಕೆ ಅಂತಾರಾಷ್ಟ್ರೀಯ ರಜತ ಪುರಸ್ಕಾರ ಲಭಿಸಿದೆ.

ಅಮೆರಿಕದ ಲಾಸ್ ಏಂಜಲೀಸ್‌ನಲ್ಲಿ ನಡೆದ ಸ್ಪಾಟ್ ಲೈಟ್ ಡಾಕ್ಯುಮೆಂಟರಿ ಫೆಸ್ಟಿವಲ್‌ನಲ್ಲಿ ಈ ಪ್ರಶಸ್ತಿ ಪ್ರಕಟಿಸಲಾಗಿದೆ. ಕನ್ನಡ ಚಿತ್ರರಂಗದ ಯುವ ನಿರ್ದೇಶಕ ಕೆ.ಕಿರಣ್ ರಾಜ್ ಅವರ ಸಮರ್ಥ ನಿರ್ದೇಶನದಲ್ಲಿ ಸಾಕ್ಷ್ಯಚಿತ್ರವನ್ನು ನಿರ್ಮಿಸಲಾಗಿತ್ತು.

ಸಲ್ಮಾನ್ ಖಾನ್‌ಗೆ ಬೆದರಿಕೆ

ಮುಂಬೈ,ಜ.೧೨– ನಗರದ ಫಿಲ್ಮ್ ಸಿಟಿಯಲ್ಲಿ ಬಾಲಿವುಡ್‌ನ ಖ್ಯಾತ ನಟ ಸಲ್ಮಾನ್ ಖಾನ್ ಅಭಿನಯದ 'ರೇಸ್ ೩' ಚಿತ್ರದ ಚಿತ್ರೀಕರಣ ನಡೆಯುತ್ತಿದ್ದ ವೇಳೆ ಶಸ್ತ್ರಾಸ್ತ್ರಗಳನ್ನು ಹೊಂದಿದ್ದ ವ್ಯಕ್ತಿಯೊಬ್ಬ ಸಲ್ಮಾನ್‌ಗೆ ಬೆದರಿಕೆ ಹಾಕಿದ್ದಾನೆ.

ಗುರುವಾರ ಈ ಘಟನೆ ನಡೆದಿದ್ದು, ಬಳಿಕ ಪೊಲೀಸರು ಭದ್ರತೆಯೊಂದಿಗೆ ಸಲ್ಮಾನ್ ಖಾನ್ ಅವರನ್ನು ಬಾಂದ್ರಾದ ನಿವಾಸಕ್ಕೆ ಕರೆದೊಯ್ದರು. ಇತ್ತೀಚೆಗೆ ರಾಜಸ್ಥಾನ ಮೂಲದ ಗ್ಯಾಂಗ್‌ಸ್ಟರ್‌ವೊಬ್ಬರು ಸಲ್ಮಾನ್ ಅವರಿಗೆ ಬೆದರಿಕೆ ಹಾಕಿದ್ದು ಸುದ್ದಿಯಾಗಿತ್ತು.

ತನ್ನ ಮೇಲೆ ದಾಳಿ ಮಾಡಲು ಸಂಚು ನಡೆಸುತ್ತಿರುವ ಬಗ್ಗೆ ಪ್ರತಿಕ್ರಿಯಿಸಿದ ಸಲ್ಮಾನ್ ಖಾನ್ ಅವರ ತಂದೆ ಸಲೀಂ ಖಾನ್, 'ನನ್ನ ಮಗನಿಗೆ ರಾಜಸ್ಥಾನ ಮೂಲದ ಗ್ಯಾಂಗ್‌ಸ್ಟರ್‌ವೊಬ್ಬರಿಂದ ಕೊಲೆ ಬೆದರಿಕೆಗಳು ಕೇಳಿ ಬರುತ್ತಿರುವುದು ನಿಜ' ಎಂದು ತಿಳಿಸಿದ್ದಾರೆ.

ಪ್ರಮಾಣಪತ್ರ ವಿತರಣೆ

ಮೈಸೂರಿನ ಶ್ರೀ ನಟರಾಜ ಮಹಿಳಾ ವಸತಿ ಪ್ರಥಮ ದರ್ಜೆ ಕಾಲೇಜಿನಲ್ಲಿ ದೈಹಿಕ ಶಿಕ್ಷಣ ವಿಭಾಗದಿಂದ ಯೋಗ ತರಬೇತಿಯಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿಗಳಿಗೆ ಪ್ರಮಾಣಪತ್ರ ವಿತರಿಸಲಾಯಿತು. ಕಾಲೇಜಿನ ಪ್ರಾಂಶುಪಾಲರಾದ ಡಾ.ಎಂ.ಶಾರದ, ದೈಹಿಕ ಶಿಕ್ಷಣ ನಿರ್ದೇಶಕರಾದ ಕೆ.ಎಂ.ಹೇಮಾವತಿ, ಯೋಗ ಶಿಕ್ಷಕ ರವಣೀಕರ್ ಮತ್ತಿತರರು ಚಿತ್ರದಲ್ಲಿದ್ದಾರೆ.

ನಲ್ಲಿ ಕಾರ್ಮಿಕರ ಸಂಘದ ದಿನದರ್ಶಿಕೆ ಬಿಡುಗಡೆ

ಮೈಸೂರಿನ ಕುವೆಂಪುನಗರದಲ್ಲಿರುವ ಸರ್ ಎಂ.ವಿಶ್ವೇಶ್ವರಯ್ಯ ನಲ್ಲಿ ಮತ್ತು ಒಳಚರಂಡಿ ಕಾರ್ಮಿಕರ ಕ್ಷೇಮಾಭಿವೃದ್ಧಿ ಸಂಘ ಹೊರತಂದಿರುವ ೨೦೧೮ನೇ ಸಾಲಿನ ದಿನದರ್ಶಿಕೆಯನ್ನು ಬಿಡುಗಡೆ ಮಾಡಲಾಯಿತು. ನ್ಯಾಯಾಧೀಶ ಮೊಹಮದ್ ಮುಜಿರುಲ್ಲ, ಮುಡಾ ಅಧ್ಯಕ್ಷ ಡಿ.ಧ್ರುವಕುಮಾರ್, ಕಾರ್ಮಿಕ ಇಲಾಖೆ ನಿರೀಕ್ಷಕ ರವಿಕುಮಾರ್, ಸಾಹಿತಿ ಬನ್ನೂರು ಕೆ.ರಾಜು, ವಕೀಲ ಸುಂದರ್‌ರಾಜ್, ಸಂಘದ ಅಧ್ಯಕ್ಷ ಚಂದ್ರು, ಖಜಾಂಚಿ ಜಯನಗರ ಮಹೇಶ್, ಕಾರ್ಯದರ್ಶಿ ಸುರೇಶ್ ಕುಮಾರ್, ನಿರ್ದೇಶಕರಾದ ಚಂದ್ರೇಗೌಡ, ರವಿಕುಮಾರ್, ಜಗದೀಶ್, ಕಾಳೇಗೌಡ, ಚಂದನ್, ತಿಮ್ಮರಾಜು ಮತ್ತಿತರರು ಚಿತ್ರದಲ್ಲಿದ್ದಾರೆ.

ರವೀಂದ್ರ ಜೋಶಿಗೆ ಸನ್ಮಾನ

ವಿವೇಕಾನಂದನಗರ ನಿವಾಸಿಗಳ ಸಂಘದಿಂದ ಸ್ವಾಮಿ ವಿವೇಕಾನಂದರ ಜನ್ಮದಿನದ ಅಂಗವಾಗಿ ಮೈಸೂರಿನ ವಿವೇಕಾನಂದ ವೃತ್ತದಲ್ಲಿರುವ ಸ್ವಾಮಿ ವಿವೇಕಾನಂದರ ಪ್ರತಿಮೆ ಬಳಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಪತ್ರಕರ್ತ ರವೀಂದ್ರ ಜೋಶಿ ಅವರನ್ನು ಸನ್ಮಾನಿಸಲಾಯಿತು. ಮಾಜಿ ಸಚಿವ ಎಸ್.ರಾಮದಾಸ್, ನಗರಪಾಲಿಕೆ ಸದಸ್ಯರಾದ ಸೀಮಾಪ್ರಸಾದ್, ಬಿ.ವಿ. ಮಂಜುನಾಥ್, ಜಗದೀಶ್, ಎಂ.ಕೆ. ಶಂಕರ್, ಮುಖಂಡರಾದ ಬಿ.ಎಂ. ರಘು, ಹೇಮಂತ್, ವಿ.ಎನ್.ಕೃಷ್ಣ, ವಿದ್ಯಾ ಅರಸ್ ಇನ್ನಿತರರು ಚಿತ್ರದಲ್ಲಿದ್ದಾರೆ.

ಎಸ್.ಚಂದ್ರಶೇಖರ್‌ಗೆ ಅಭಿನಂದನೆ

ಮೈಸೂರು ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ಅಧ್ಯಕ್ಷ ಹಾಗೂ ಜನತಾ ಬಜಾರ್ ಅಧ್ಯಕ್ಷ ಎಸ್.ಚಂದ್ರಶೇಖರ್ ಅವರಿಗೆ ದಿಲ್ಲಿಯ ಗ್ಲೋಬಲ್ ಅಚೀವರ್ಸ್ ಫೌಂಡೇಷನ್‌ನಿಂದ ಸಹಕಾರ ಬ್ಯಾಂಕ್‌ಗಳಲ್ಲಿ ಅತ್ಯುತ್ತಮ ನಿರ್ವಹಣೆಗಾಗಿ ನೀಡುವ ಉತ್ತಮ ಅಧ್ಯಕ್ಷ ಪ್ರಶಸ್ತಿ ಲಭಿಸಿದ್ದು, ಅವರನ್ನು ಬ್ಯಾಂಕಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಬಿ.ನಾಗರಾಜು ಅಭಿನಂದಿಸಿದರು. ಸಿಬ್ಬಂದಿ ವರ್ಗ ಚಿತ್ರದಲ್ಲಿದ್ದಾರೆ.

ರಾಯಣ್ಣ ಬ್ರಿಗೇಡ್ ಅಭಿಮಾನಿಗಳ ಬಳಗದ ದಿನದರ್ಶಿಕೆ ಬಿಡುಗಡೆ

ಮೈಸೂರಿನ ಸಿದ್ಧಾರ್ಥ ಬಡಾವಣೆಯಲ್ಲಿರುವ ಸಂಗೊಳ್ಳಿ ರಾಯಣ್ಣ ಬ್ರಿಗೇಡ್ ಅಭಿಮಾನಿಗಳ ಬಳಗ ಹೊರತಂದಿರುವ ೨೦೧೮ನೇ ಸಾಲಿನ ದಿನದರ್ಶಿಕೆಯನ್ನು ಮಾಜಿ ಸಚಿವ ಸಿ.ಎಚ್.ವಿಜಯಶಂಕರ್ ಬಿಡುಗಡೆ ಮಾಡಿದರು. ಜಿಪಂ ಸದಸ್ಯ ಬೀರಿಹುಂಡಿ ಬಸವಣ್ಣ, ಬಳಗದ ಅಧ್ಯಕ್ಷ ನಂಜಪ್ಪ, ಉಪಾಧ್ಯಕ್ಷ ಕೆ.ಆರ್.ಎಂ.ಮಹದೇವು, ಕಾರ್ಯದರ್ಶಿ ಪುರುಷೋತ್ತಮ್, ಆನಂದ, ಜಯರಾಮು, ರಾಘು ಮತ್ತಿತರರು ಚಿತ್ರದಲ್ಲಿದ್ದಾರೆ.

ಕಾಂಗ್ರೆಸ್ ಎಸ್‌ಸಿ ವಿಭಾಗಕ್ಕೆ ನೇಮಕ

ಮೈಸೂರು,ಜ.೧೨– ಮೈಸೂರು ನಗರ (ಜಿಲ್ಲಾ) ಕಾಂಗ್ರೆಸ್ ಸಮಿತಿ ಪ.ಜಾತಿ ವಿಭಾಗದ ಉಪಾಧ್ಯಕ್ಷರನ್ನಾಗಿ ವಿ. ಕೃಷ್ಣಮೂರ್ತಿ ಅವರನ್ನು ನೇಮಕ ಮಾಡಲಾಗಿದೆ ಎಂದು ಪ.ಜಾತಿ ವಿಭಾಗದ ಅಧ್ಯಕ್ಷ ಆರ್.ಸುನಂದ ಕುಮಾರ್ ತಿಳಿಸಿದ್ದಾರೆ.

ಸುಡೊಕು-೯೫೯

೪			೮				೬	
			೬		೩		೭	೪
೯	೫					೧		
				೫			೨	೯
	೩				೬			೧
	೯	೨	೪					
೭		೧		೮	೨			
೩					೯	೨		
		೯		೩		೮		೬

ಆಡುವುದು ಹೇಗೆ ?

ಮನೆಗಳನ್ನು ೧ರಿಂದ ೯ರವರೆಗಿನ ಅಂಕಿಗಳಿಂದ ತುಂಬಿ, ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

೯೫೮ ರ ಉತ್ತರ

೯	೪	೧	೮	೩	೫	೨	೭	೬
೫	೩	೮	೨	೬	೭	೯	೪	೧
೨	೭	೬	೪	೯	೧	೫	೩	೮
೭	೧	೪	೫	೮	೨	೩	೬	೯
೬	೮	೨	೩	೪	೯	೭	೧	೫
೩	೫	೯	೭	೧	೬	೪	೮	೨
೪	೯	೩	೬	೨	೮	೧	೫	೭
೮	೨	೫	೧	೭	೪	೬	೯	೩
೧	೬	೭	೯	೫	೩	೮	೨	೪